
# ಶ್ರೀಗಂಧ

## ಐದನೆಯ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನ ಸ್ಮರಣ ಸಂಚಿಕೆ - ೨೦೦೮













भारतीय राजदूतावास
السفارة الهندية
EMBASSY OF INDIA
P.O. BOX 2788, DOHA-QATAR
Tel: (974)-4255777; Fax: (974)-4670448
E-mail: indembdh@qatar.net.qa
Homepage: http://www.indianembassy.gov.qa



November 23, 2008

# MESSAGE

I am delighted to know that the Karnataka Sangha, Qatar is organising the World Kannada Cultural Convention on December 19 and 20, 2008 in Doha.

The Karnataka Sangha has, over the years, lent enormous support to various community related events in Qatar. Organising an event of the scale and size as the World Kannada Convention requires enormous skill and planning. I am confident that the Karnataka Sangha would host the event in the most effective and successful manner.

Please accept my good wishes for the same.

**[ Sanjiv Kohli ]**
**Minister**

# ಅಧ್ಯಕ್ಷರ ನುಡಿ



ಪ್ರಿಯ ಬಾಂಧವರೇ ಮತ್ತು ಸ್ನೇಹಿತರೇ,

ಈ ವರ್ಷ ಕರ್ನಾಟಕ ಸಂಘ ಕತಾರ್ ಜನ್ಮ ತಳೆದು ಒಂದು ದಶಕವಾಯಿತು. ಹತ್ತು ವರ್ಷಗಳ ಹಿಂದೆ ೧೯೯೮ ರಲ್ಲಿ ಶ್ರೀಯುತ ಸತೀಶ್ ದೇಶ್‌ಪಾಂಡೆ, ಡಾ|| ಚಂದ್ರಶೇಖರ ಮೂರ್ತಿ ಅವರ ಒಂದು ಒಳ್ಳೆಯ ವಿಚಾರದ ಫಲ, ಇಂದಿನ ಕರ್ನಾಟಕ ಸಂಘ. ಐವತ್ತು ಜನರಿಂದ ಶುರುವಾಗಿ, ಪುಟ್ಟ ಮಗುವಂತಿದ್ದ ಸಂಘವನ್ನು ಬೆಳೆಸಿ ಪೋಷಿಸಿದವರು ಮುಂದೆ ಅಧ್ಯಕ್ಷರಾಗಿ ಬಂದಂತಹ ಶ್ರೀಯುತ ನಾಗರಾಜ್, ಶ್ರೀಯುತ ಪ್ರಕಾಶ್ ಬಾಬು ಮತ್ತು ಶ್ರೀಯುತ ಪ್ರಭಾಕರವರು. ಈ ಎಲ್ಲಾ ಮಹನೀಯರಿಗೆ ನಾನಷ್ಟೇ ಅಲ್ಲ, ಇಡೀ ಕರ್ನಾಟಕ ಸಂಘವೇ ಚಿರಋಣಿಯಾಗಿರುತ್ತದೆ. ಇಂದಿನ ಕರ್ನಾಟಕ ಸಂಘ ಅವರೆಲ್ಲ ಮಾಡಿದ ಒಂದು ಒಳ್ಳೆಯ ಕರ್ಮದ ಫಲ.

ಕಳೆದ ಎರಡು ವರ್ಷದಿಂದ ಕರ್ನಾಟಕಕ್ಕೆ ಇನ್ನೂ ಒಳ್ಳೆಯ ಹೆಸರು ಬಂದಿದೆ. ಇದಕ್ಕೆ ಕಾರಣ ನಾವು ಮಾಡಿದ ಅನೇಕ ಸೇವಾ ಕಾರ್ಯಗಳು ಹಾಗು ರಕ್ತದಾನ ಶಿಬಿರ. ಈ ಸಲದ ಸಮ್ಮೇಳನ ಅನೇಕ ವಿಶೇಷತೆಗಳಿಂದ ಕೂಡಿದೆ. ಹೆಸರಾಂತ ಸಾಹಿತಿಗಳು, ಕಿರುತೆರೆ, ಬೆಳ್ಳಿತೆರೆ ನಟರು, ಪತ್ರಿಕೋದ್ಯಮದವರು, ಸಂಗೀತ ಕ್ಷೇತ್ರದಲ್ಲಿರುವ ಅನೇಕ ಕಲಾವಿದರು, ಸರ್ಕಾರದ ಮಂತ್ರಿಗಳು, ಶಾಸಕರು, ಅತೀ ಮುಖ್ಯವಾಗಿ ಹಳ್ಳಿಗಳಿಂದ ಬಂದ ಜಾನಪದ ಕಲಾವಿದರು ಪಾಲ್ಗೊಳ್ಳಲಿದ್ದಾರೆ.

ಈ ಸಂದರ್ಭದಲ್ಲಿ ಜಗತ್ತಿನ ಅನೇಕ ಭಾಗಗಳಿಂದ ಬಂದಿರುವ ಎಲ್ಲ ಮಹನೀಯರಿಗೆ, ಕಲಾವಿದರಿಗೆ, ಜಾನಪದ ತಜ್ಞ, ಪದ್ಮಶ್ರೀ ಡಾ|| ಚಂದ್ರಶೇಖರ್ ಕಂಬಾರ್ ಮತ್ತು ಶ್ರೀ ಮಂಜುನಾಥ್ ಸಾಗರ್ " ಹೃದಯ ವಾಹಿನಿ " ಪತ್ರಿಕೆ, ಮಂಗಳೂರು, ಇವರಿಗೆಲ್ಲರಿಗೂ ನನ್ನ ನಮನ ಮತ್ತು ಸ್ವಾಗತ. ಇದು ಮಂಜುನಾಥ್ ಅವರು ಆಯೋಜಿಸುತ್ತಿರುವ ಐದನೇ ಸಮ್ಮೇಳನ. ಅವರು ಇದೇ ರೀತಿ ಮುಂದೆ ಕೂಡ ಈ ತರಹದ ಕಾರ್ಯವನ್ನು ಮುಂದುವರಿಸಲಿ ಎಂದು ಹಾರೈಸುತ್ತೇನೆ.

ನಮ್ಮ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರಕಿರುವುದು ಬಹು ಹೆಮ್ಮೆಯ ವಿಷಯ. ಇದಕ್ಕಾಗಿ ದುಡಿದ ಎಲ್ಲಾ ಮಹನೀಯರಿಗೆ ನಮ್ಮ ಕರ್ನಾಟಕ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು. ಜ್ಞಾನಪೀಠ ಪ್ರಶಸ್ತಿ ವಿಜೇತ ವರಕವಿ ದ.ರಾ. ಬೇಂದ್ರೆ ಅವರು ಬರೆದ "ಒಂದೇ ಒಂದೇ ಒಂದೇ ಕರ್ನಾಟಕ ಒಂದೇ......" ಕವನ ಈ ದಿನ ನಾವು ಆಚರಿಸುತ್ತಿರುವ ಸಮ್ಮೇಳನಕ್ಕೆ ಮತ್ತು ಸಂದರ್ಭಕ್ಕೆ ಅತಿ ಸೂಕ್ತವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

ಈ ಒಂದು ಮಹಾ ಕನ್ನಡ ಯಜ್ಞದಲ್ಲಿ ನಮ್ಮ ಜೊತೆ ತುಳು ಕೂಟ, ಮಂಗಳೂರು ಕ್ರಿಕೆಟ್ ಕ್ಲಬ್, ಮಂಗಳೂರು ಮುಸ್ಲಿಮ್ ಸಂಘ, ಕರ್ನಾಟಕ ಮುಸ್ಲಿಮ್ ಸಂಘ ಎಲ್ಲರೂ ನಮ್ಮ ಹಿಂದೆ ನಿಂತು ನಮ್ಮನ್ನು ಪ್ರೋತ್ಸಾಹಿಸಿ ನಮ್ಮ ಜೊತೆಗೂಡಿ ನಿಂತಿರುವರು. ಅವರ ಮತ್ತು ನಮ್ಮ ನಡುವೆ ಇರುವ ಸ್ನೇಹ ಮತ್ತು ಅವರೆಲ್ಲರ ಕನ್ನಡ ನಾಡಿನ ಪ್ರೇಮ ಇದಕ್ಕೆ ಸಾಕ್ಷಿಯಾಗಿದೆ.

ಈ ಒಂದು ಮಹಾ ಮೇಳಕ್ಕೆ ನನ್ನ ಜೊತೆಯಾಗಿ ನಿಂತ ನಮ್ಮ ಸಂಘದ ಪದಾಧಿಕಾರಿಗಳು ಮತ್ತು ಸಂಘದ ಎಲ್ಲಾ ಸದಸ್ಯರುಗಳಿಗೆ ನನ್ನ ವಂದನೆಗಳು. ಇವರೆಲ್ಲರ ಪ್ರೋತ್ಸಾಹ, ಕಠಿಣ ಪರಿಶ್ರಮದ ಫಲವೇ ಈ ಸಮ್ಮೇಳನ, ಅಲ್ಲದೆ ಸಮ್ಮೇಳನಕ್ಕಾಗಿ ಶ್ರಮಿಸಿರುವ ಎಲ್ಲಾ ಸದಸ್ಯರಿಗೂ ನನ್ನ ನಮನಗಳು.

ಎಲ್ಲ ಕನ್ನಡಿಗರಲ್ಲಿ ನನ್ನ ಒಂದೇ ಒಂದು ಕಳಕಳಿಯ ವಿನಂತಿ "ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು" ಮತ್ತು ಕನ್ನಡ ಸಂಘದ ಸದಸ್ಯನಾಗಿರು. ಇದೇ ನೀವು ನಮ್ಮ ನಾಡಿಗೆ ಸಲ್ಲಿಸುವ ಗೌರವ. ಜಾತಿ ಧರ್ಮಗಳನ್ನು ಬದಿಗಿಟ್ಟು ನಾವೆಲ್ಲ ಕನ್ನಡಕ್ಕಾಗಿ ದುಡಿಯೋಣ. ಕನ್ನಡವನ್ನು ಬೆಳೆಸೋಣ, ಉಳಿಸೋಣ. ಇದೇ ನಾವು ನಮ್ಮ ನಾಡಿಗೆ ಸಲ್ಲಿಸುವ ಗೌರವ ಎಂದೇ ನನ್ನ ಭಾವನೆ. ಎಲ್ಲರೂ ಸೇರಿದರೆ ಕನ್ನಡ ಕಹಳೆಯ ಶಬ್ಧ ಮತ್ತು ಡಿಂಡಿಮಗಳ ಕಂಪನ ಎಲ್ಲಾ ಕನ್ನಡಿಗರ ಹೃದಯದಲ್ಲಿ ಕನ್ನಡ ತರಂಗಗಳನ್ನು ಸೃಷ್ಟಿಸಬಹುದು.

**ಅರವಿಂದ ಪಾಟೀಲ್**
**ಅಧ್ಯಕ್ಷರು**



## ಸಂಪಾದಕೀಯ...........

ಪ್ರಿಯ ಕನ್ನಡಿಗರೆ,

ಕರ್ನಾಟಕ ಸಂಘವು ದಕ್ಷತೆಯಿಂದ ಕಾರ್ಯ ನಿರ್ವಹಿಸಿ ದಶಮಾನೋತ್ಸವದ ಸಂಭ್ರಮದಲ್ಲಿ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನವನ್ನು ಏರ್ಪಡಿಸುತ್ತಿರುವುದು ಒಂದು ಮಹಾತ್ವಾಕಾಂಕ್ಷೆಯ ಘಟನೆಯೇ ಆಗಿದೆ. ಇದು ಇಲ್ಲಿರುವ ಕನ್ನಡಿಗರ ಶ್ರಮ, ಭಾಷೆಯ ಬಗ್ಗೆ ಅಭಿಮಾನ, ಸ್ನೇಹ ಮತ್ತು ಸಾಮರಸ್ಯದ ಪ್ರತೀಕವಾಗಿದೆ. ನಾವು ಒಂದು ಭವ್ಯ ಹಾಗು ಶ್ರೀಮಂತ ಸಂಸ್ಕೃತಿಯ ವಾರಸುದಾರರು ಎಂಬುದನ್ನು ಇಲ್ಲಿನ ಕನ್ನಡಿಗರು ಮರೆತಿಲ್ಲ.

ಕರ್ನಾಟಕದಿಂದ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿಗೆ ಏಳು ಮಂದಿ ಅಗ್ರಮಾನ್ಯ ಸಾಹಿತಿಗಳು ಪಾತ್ರರಾಗಿರುವುದು ಕನ್ನಡಿಗರಾದ ನಮಗೆಲ್ಲಾ ಹೆಮ್ಮೆಯ ವಿಷಯ. ಅಲ್ಲದೆ ,ಈಗ ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನ ದೊರೆತಿರುವುದು ಮತ್ತೊಂದು ಸಂತೋಷದ ಸುದ್ದಿ.

ರಾಷ್ಟ್ರ ಕವಿ ಕುವೆಂಪು ರವರ ಕೆಲವು ಸಾಲುಗಳನ್ನು ಇಲ್ಲಿ ಸ್ಮರಿಸಲು ಇಚ್ಛಿಸುತ್ತೇನೆ:
ಬಾಳುವುದೇತಕೆ? ನುಡಿ, ಎಲೆ ಜೀವ!
ಸಿರಿಗನ್ನಡದಲಿ ಕವಿತೆಯ ಹಾಡೆ!
ಸಿರಿಗನ್ನಡದೇಳಿಗೆಯನು ನೋಡೆ!
ಕನ್ನಡ ತಾಯಿಯ ಸೇವೆಯ ಮಾಡೆ!

ಈ ಸಮ್ಮೇಳನಕ್ಕಾಗಿ ದಿನರಾತ್ರಿಯೆನ್ನದೆ ದುಡಿದವರು ನಮ್ಮ ಅಧ್ಯಕ್ಷರಾದ ಶ್ರೀ. ಅರವಿಂದ ಪಾಟೀಲ್ ಮತ್ತು ಅವರ ಆಡಳಿತ ವರ್ಗದವರು. ಅವರ ಅವಿರತ ಶ್ರಮ, ದಿಟ್ಟತನ ಮತ್ತು ಪ್ರಾಮಾಣಿಕತೆಯ ಪ್ರಯತ್ನವೇ ಇಂದಿನ ಸಾಧನೆ. ಈ ಸಾಧನೆಯಲ್ಲಿ ನನ್ನ ಪಾತ್ರ ಬಹಳ ಕಿರಿದಾಗಿಯೇ ಇದೆ. ಈ ಶುಭ ಸಂದರ್ಭದಲ್ಲಿ ಶ್ರೀಗಂಧದ ಪ್ರಧಾನ ಸಂಪಾದಕಿಯಾಗಿರುವುದು ನನ್ನ ಭಾಗ್ಯ. ನಮ್ಮ ಶ್ರೀಗಂಧದ ತಂಡದ ಪರವಾಗಿ ಅವರಿಗೆ ನನ್ನ ಅಭಿನಂದನೆಗಳು

ಈ ಬಾರಿಯ ಸಂಚಿಕೆಯನ್ನು ಹೊರತರಲು ಸಹಕರಿಸಿ ಸಹಾಯ ಮಾಡಿದ ಸಹ ಸಂಪಾದಕೀಯರಾದ ರೂಪ ಮತ್ತು ಲಕ್ಷ್ಮಿಯವರಿಗೆ ನನ್ನ ವಂದನೆಗಳು. ಇವರಲ್ಲದೆ ಸದಾ ನನ್ನ ಸಹಾಯಕ್ಕೆ ಇದ್ದ ಶ್ರೀ. ಮನ್ನಂಗಿ, ಅರವಿಂದ್ ಪಾಟೀಲ್, ಪಾಲ್ ಮತ್ತು ಪ್ರಭಾಕರ್ ಅವರಿಗೂ ನಾನು ಆಭಾರಿಯಾಗಿದ್ದೇನೆ. ಜಾಹೀರಾತುಗಳನ್ನು ಸಕಾಲಕ್ಕೆ ಒದಗಿಸಿದ ಸದಸ್ಯರಿಗೆ, ಪ್ರಾಯೋಜಕರಿಗೆ ಮತ್ತು ಈ ಸ್ಮರಣ ಸಂಚಿಕೆಯನ್ನು ಮುದ್ರಿಸಿದ ದೋಹಾ ಮಾಡರ್ನ್ ಮುದ್ರಣಾಲಯದವರಿಗೂ ನನ್ನ ಧನ್ಯವಾದಗಳು.

ಮತ್ತೊಮ್ಮೆ ನಮ್ಮ ಕತಾರಿನಲ್ಲಿ ಆಚರಿಸುತ್ತಿರುವ ೫ ನೆಯ ವಿಶ್ವ ಕನ್ನಡ ಸಂಸ್ಕೃತಿ ಸಮ್ಮೇಳನವು ಅದ್ದೂರಿಯಿಂದ ನಡೆಯಲಿ ಎಂದು ಹಾರೈಸುತ್ತೇನೆ.

ಇಂತಿ ನಿಮ್ಮ ವಿಶ್ವಾಸಿ

**ಸುಧಾ ಪ್ರಭಾಕರ**

ಪ್ರಧಾನ ಸಂಪಾದಕಿ

# ಕರ್ನಾಟಕ ಸಂಘದ ಆಡಳಿತ ಮಂಡಳಿ ೨೦೦೭ - ೨೦೦೮



ಅರವಿಂದ ಪಾಟೀಲ್
ಅಧ್ಯಕ್ಷರು



ವಿ. ಎಸ್. ಮನ್ನಂಗಿ
ಉಪಾಧ್ಯಕ್ಷರು



ಸಂಜಯ್ ಕುದ್ರಿ
ಮುಖ್ಯ ಕಾರ್ಯದರ್ಶಿ



ನಾಗೇಶ್ ರಾವ್
ಖಜಾಂಚಿ



ಅರುಣ್ ಕುಮಾರ್
ಬೃಹತ್ ಕಾರ್ಯಕ್ರಮ ಸಂಚಾಲಕರು



ಅರುಣ್ ಕುಮಾರ್ ಎಮ್.ಕೆ
ಸಹ ಸಾಂಸ್ಕೃತಿಕ ಕಾರ್ಯದರ್ಶಿ



ದಿನೇಶ್ ಗೌಡ
ಸಹ ಕ್ರೀಡಾ ಕಾರ್ಯದರ್ಶಿ



ಅನಿಲ್ ಬೋಲೂರ್
ತೇಜಸ್ ಸಹ ಸಂಚಾಲಕರು

## ಕಾರ್ಯಕಾರಿಣಿ ಸದಸ್ಯರು



ಎಮ್.ಎ.ಶರೀಫ್



ಗೋಪಾಲ್ ಎ.ಎಮ್



ವಿಕ್ರಾಂತ್ ಪಾಟೀಲ್



ನಿರ್ಮಲಾ ರಘುರಾಮನ್
ಪ್ರಗತಿ ಮುಖ್ಯ ಸಂಚಾಲಕಿ




ಜಾನಕಿ ರವಿ
ತೇಜಸ್ ಸಂಚಾಲಕರು

## ಸಲಹಾ ಸಮಿತಿ



ಕೆ. ಪ್ರಭಾಕರ



ಪಾಲ್ ಜೆ.ಜೆ

---

## ಸಂಪಾದಕರು

## ಸಹ ಸಂಪಾದಕರು



ಸುಧಾ ಪ್ರಭಾಕರ



ಲಕ್ಷ್ಮಿ ಮಧು



ರೂಪಾ ಪ್ರಮೋದ್

---

## ಮುಖ ಪುಟ ಲೇಖನ

ಜ್ಞಾನ ಪೀಠ ಪ್ರಶಸ್ತಿ ವಿಜೇತರು

೧. ಡಾ|| ಕುವೆಂಪು – ಶ್ರೀ ರಾಮಾಯಣ ದರ್ಶನಂ ( ೧೯೬೮ )

೨. ಡಾ|| ದ. ರಾ. ಬೇಂದ್ರೆ – ನಾಕು ತಂತಿ ( ೧೯೭೪ )

೩. ಡಾ|| ಶಿವರಾಮ ಕಾರಂತ – ಮೂಕಜ್ಜಿಯ ಕನಸುಗಳು ( ೧೯೭೮ )

೪. ಡಾ|| ಮಾಸ್ತಿ ವೆಂಕಟೇಶ್ ಅಯ್ಯಂಗಾರ್ – ಚಿಕ ವೀರ ರಾಜೇಂದ್ರ ( ೧೯೮೩ )

೫. ಡಾ|| ವಿ.ಕೃ. ಗೋಕಾಕ್ – ಭಾರತ ಸಿಂಧೂ ರಶ್ಮಿ (೧೯೯೧ )

೬. ಡಾ|| ಯು. ಆರ್. ಅನಂತ ಮೂರ್ತಿ – ಸಮಗ್ರ ಸಾಹಿತ್ಯ (೧೯೯೪ )

೭. ಡಾ|| ಗಿರೀಶ್ ಕಾರ್ನಾಡ್ – ಸಮಗ್ರ ಸಾಹಿತ್ಯ ( ೧೯೯೮ )

ವಿಧಾನ ಸೌಧ

ಇದು ಕರ್ನಾಟಕದ ಆಡಳಿತ ಕೇಂದ್ರ. ಇದನ್ನು ೧೯೫೭ ರಲ್ಲಿ ಕೆಂಗಲ್ ಹನುಮಂತಯ್ಯನವರು ಕಟ್ಟಿಸಿದರು.

ಕತಾರ್

ದೋಹಾದ ಮನಮೋಹಕ ವೀಕ್ಷಣೆಯ ತಾಣ ಮತ್ತು ೨೦೦೬ ರ ಏಷ್ಯನ್ ಗೇಮ್ಸ್ ಸಮಾರಂಭಕ್ಕಾಗಿ ರೂಪಿಸಿದ ವಿಜಯ ಸ್ತೂಪ